# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ/437/2019/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 21/2/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ.ಟಿ.ಎಂ.ನಾಗರಾಜು, ಸಹಾಯಕ ಇಂಜಿನಿಯರ್-2, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ (ಹಾಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಉಪವಿಭಾಗ, ಹರಿಹರ ದಾವಣಗೆರೆ). - ಇವರ ವಿರುದ್ಧದ ನಡವಳಿ ಕುರಿತು.

******

1) ಶ್ರೀ.ಕೆ.ಮಣಿಕಂಠ ಬಿನ್ ಕರುಣಾಕರನ್, ಜಿಲ್ಲಾಧ್ಯಕ್ಷರು, ಶ್ರೀರಾಮ ಸೇನೆ, 4ನೇ ಮೇನ್, 1ನೇ ಕ್ರಾಸ್, ವಿನೋಬಾನಗರ, ದಾವಣಗೆರೆ, (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಟಿ.ಎಂ.ನಾಗರಾಜು, ಸಹಾಯಕ ಇಂಜಿನಿಯರ್-2, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ (ಹಾಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಉಪವಿಭಾಗ, ಹರಿಹರ ದಾವಣಗೆರೆ) (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2) ದೂರುದಾರರು ತಮ್ಮ ದೂರಿನಲ್ಲಿ, ಎದುರುದಾರರು ತಮ್ಮ ಹೆಸರಿಗೆ, ಹೆಂಡತಿ, ಮಕ್ಕಳ ಹೆಸರಿಗೆ, ಸಂಬಂಧಿಕರ ಹೆಸರಿಗೆ ಸರ್ಕಾರಿ ಸೇವೆಯನ್ನು ದುರುಪಯೋಗಪಡಿಸಿಕೊಂಡು ಅಕ್ರಮ ಆಸ್ತಿಯನ್ನು ಹೊಂದಿರುತ್ತಾರೆಂದು ಆಪಾದಿಸಿ ದೂರು ಸಲ್ಲಿಸಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ಗೌರವಾನ್ವಿತ ಉಪಲೋಕಾಯುಕ್ತರ ದಿ.24/7/2019 ರ ಆದೇಶದಂತೆ, ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪೂರ್ವ ವಲಯ, ದಾವಣಗೆರೆ ಇವರಿಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಆದೇಶಿಸಿದ್ದು, ಸದರಿ ಆದೇಶದನ್ವಯ ಸದರಿ ತನಿಖಾಧಿಕಾರಿಯವರು ದಿ.22/9/2020 ರಂದು ವರದಿ ಸಲ್ಲಿಸಿರುತ್ತಾರೆ.

3) ಸದರಿ ವರದಿಯನ್ನು ಪರಿಶೀಲಿಸಲಾಗಿ, ತನಿಖಾಧಿಕಾರಿಯವರು ಸ್ಥಿರ ಮತ್ತು ಚರ ಆಸ್ತಿಗಳನ್ನು ಎದುರುದಾರರು ಹೊಂದಿರುತ್ತಾರೆ ಎನ್ನುವ ಕುರಿತು ವಿವರವನ್ನು ಈ ಕೆಳಗಿನಂತೆ ವರದಿಯಲ್ಲಿ ನಮೂದಿಸಿರುತ್ತಾರೆ.

## ಗುಪ್ತ ಮಾಹಿತಿಯಿಂದ ತಿಳಿದುಬಂದ ಎದುರುದಾರರ ಸ್ಥಿರ ಆಸ್ತಿಯ ವಿವರ

| ಕ್ರ.ಸಂ. | ಆಸ್ತಿಯ ವಿವರಗಳು | ಮೌಲ್ಯ |
|---|---|---|
| 1 | ದಾವಣಗೆರೆ ತಾಲ್ಲೂಕು ತೋಳಹುಣಸೆ ಗ್ರಾಮದ ಸರ್ವೆ ನಂ.6/1 ರಲ್ಲಿ 01 ಎಕರೆ 10 ಗುಂಟೆ ಜಮೀನು ಇದ್ದು, ಇದು ಎದುರುದಾರರ & ಎದುರುದಾರರ ತಾಯಿ, ತಮ್ಮ & ತಂಗಿಯ ಹೆಸರಿನಲ್ಲಿದ್ದು ಜಂಟಿಯಾಗಿದ್ದು ಪಿತ್ರಾರ್ಜಿತವಾಗಿರುತ್ತದೆ ಬಂದಿರುತ್ತದೆ | -- |
| 2 | ದಾವಣಗೆರೆ ಸಿಟಿ ಶಾಬನೂರು ಗ್ರಾಮದ ರಿ.ಸ.ನಂ.1582 & 158/3 ರಲ್ಲಿ #1927/14 ರಲ್ಲಿ 39*76 ಅಡಿ ಅಳತೆಯ ನಿವೇಶನ ದಿ.9/11/16 ರಂದು ಎದುರುದಾರರ ಹೆಂಡತಿ ಶ್ರೀಮತಿ.ಮಮತಾ ಇವರಿಗೆ ಅವರ ತಾಯಿ ಶ್ರೀಮತಿ.ಪ್ರೇಮಲೀಲಾ ಕೋಂ ಲೇ:ಕೆ.ಹೆಚ್.ಶಿವಮೂರ್ತಿ ಇವರು ದಾನವಾಗಿ ನೀಡಿರುತ್ತಾರೆ. ಪಿತ್ರಾರ್ಜಿತ | -- |
| 3 | ಎದುರುದಾರರ ಹೆಂಡತಿ ಶ್ರೀಮತಿ.ಮಮತಾ ಇವರಿಗೆ ಅವರ ತಾಯಿ ಶ್ರೀಮತಿ.ಪ್ರೇಮಲೀಲಾ ಕೋಂ ಲೇ:ಕೆ.ಹೆಚ್.ಶಿವಮೂರ್ತಿ ಇವರು ದಾನವಾಗಿ ನೀಡಿರುವ ದಾವಣಗೆರೆ ಸಿಟಿ ಶಾಬನೂರು ರಿ.ಸ.ನಂ.1582 & 158/3 ರಲ್ಲಿ #1927/14 ರಲ್ಲಿ 39*76 ಅಡಿ ಅಳತೆಯ ನಿವೇಶನದಲ್ಲಿ ನಿರ್ಮಾಣ ಮಾಡಿರುವ ಮನೆ. | 60,00,000/- |
| | ಒಟ್ಟು | **60,00,000/-** |

## ಸ.ಸ.ಅ. ರವರ ಚರಾಸ್ಥಿಗಳ ವಿವರ

| ಕ್ರ ಸಂ. | ಚರಾಸ್ತಿಯ ವಿವರಗಳು | ಚ.ಅಂದಾಜು ಮೌಲ್ಯ |
|---|---|---|
| 1 | ಎದುರುದಾರರ ಮಗಳು ಪ್ರೀತಿ ಇವರ ಹೆಸರಿನಲ್ಲಿ ಕೆಎ 17 ಇಡಬ್ಲ್ಯೂ 0164 ಪ್ಯಾಸಿನೋ ಸ್ಕೂಟರ್ ಇರುತ್ತದೆ. | 70000 |
| 2 | ಎದುರುದಾರರ ಹೆಸರಿನಲ್ಲಿ ಕೆಎ-17/ಪಿ/4833 ನೇ ಟಾಟ ಕಂಪನಿಯ ಬೋಲ್ಟ್ ಕಾರು ಇರುತ್ತದೆ. | 600000 |
| 3 | ಎದುರುದಾರರು ಹೊಂದಿರಬಹುದಾದ ಬಂಗಾರದ ಆಭರಣ ಹಾಗೂ ಬೆಳ್ಳಿಯ ಸಾಮಾಗ್ರಿಗಳ ಅಂದಾಜು ಮೊತ್ತ | 300000 |
| 4 | ಎದುರುದಾರರು ಹೊಂದಿರಬಹುದಾದ ಗೃಹೋಪಯೋಗಿ ಸಾಮಾಗ್ರಿಗಳ ಅಂದಾಜು ಮೊತ್ತ | 300000 |
| 5 | ಎದುರುದಾರರು ತನ್ನ & ತನ್ನ ಕುಟುಂಬದ ಸದಸ್ಯರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಹೊಂದಿರಬಹುದಾದ ಎಫ್.ಡಿ, ಬ್ಯಾಂಕ್ ಬ್ಯಾಲೆನ್ಸ್ & ವಿಮಾ ಮೊತ್ತ | 400000 |
| | ಒಟ್ಟು | **16,70,000/-** |

## ಸ.ಸ.ಅ ರವರು ಪಡೆದಿರಬಹುದಾದ ಅಂದಾಜು ಆದಾಯ

| ಕ್ರ ಸಂ. | ಆದಾಯದ ವಿವರಗಳು | ಅಂದಾಜು ಮೊತ್ತ |
|---|---|---|
| 1 | ಸ.ಸ.ಅ ರವರು ಸೇವಾ ಅವಧಿಯಲ್ಲಿ ಪಡೆದಿರಬಹುದಾದ ನಿವ್ವಳ ಅಂದಾಜು ಆದಾಯ | 6000000 |
| 2 | ಸ.ಸ.ಅ ರವರ ಕೃಷಿ ಆದಾಯ | 500000 |
| 3 | ಎದುರುದಾರರ ಹೆಂಡತಿ ಶ್ರೀಮತಿ.ಮಮತಾ ಇವರಿಗೆ ಅವರ ತಾಯಿ ಶ್ರೀಮತಿ.ಪ್ರೇಮಲೀಲಾ ಕೋಂ ಲೇ:ಕೆ.ಹೆಚ್.ಶಿವಮೂರ್ತಿ ಇವರು ದಾನವಾಗಿ ನೀಡಿರುವ ದಾವಣಗೆರೆ ಸಿಟಿ ಶಾಬನೂರು ರಿ.ಸ.ನಂ.1582 & 158/3 ರಲ್ಲಿ #1927/14 ರಲ್ಲಿ 39*76 ಅಡಿ ಅಳತೆಯ ನಿವೇಶನದಲ್ಲಿ ಮನೆ ನಿರ್ಮಾಣಕ್ಕೆ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್ ಎಂ.ಸಿ.ಸಿ. 'ಬಿ' | 3300000 |

| | | |
|---|---|---|
| | ಬ್ಲಾಕ್ ದಾವಣಗೆರೆ ಶಾಖೆಯಲ್ಲಿ ಪಡೆದ ಸಾಲ | |
| | ಒಟ್ಟು | 9500000 |

4) ಸದರಿ ವರದಿಯನ್ವಯ ಗೌರವಾನ್ವಿತ ಉಪಲೋಕಾಯುಕ್ತರ ದಿ.19/10/2020 ರ ಆದೇಶದಂತೆ, ಎದುರುದಾರರು ಚರ ಆಸ್ತಿ ವಿವರ ಕ್ರ.ಸಂ.1, 2 ಮತ್ತು 5 ಅದೇರೀತಿ ಎದುರುದಾರರು ಪಡೆದಿರಬಹುದಾದ ಆದಾಯದ ವಿವರಗಳ ಕ್ರ.ಸಂ.3 ರ ಕುರಿತು ಸಕ್ಷಮ ಪ್ರಾಧಿಕಾರದಿಂದ ಕೆ.ಸಿ.ಎಸ್.(ನಡತೆ) ನಿಯಮಾವಳಿ 1966 ರ ನಿಯಮ 23 ರನ್ವಯ ಪೂರ್ವಾನುಮತಿ ಪಡೆದಿರುವ ಕುರಿತು ವರದಿ ಪಡೆಯುವಂತೆ ಆದೇಶಿಸಿದರನ್ವಯ, ದಿ.20/1/2021 ರಂದು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ದಾವಣಗೆರೆ ಇವರು ವರದಿ ಸಲ್ಲಿಸಿರುತ್ತಾರೆ.

5) ಸದರಿಯವರ ವರದಿಯಲ್ಲಿ ಪ್ರಸ್ತುತ ಎದುರುದಾರರು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆಯಲ್ಲಿ ಎರವಲು ಸೇವೆ ಸಲ್ಲಿಸುತ್ತಿದ್ದು, ಅದರಂತೆ ಸದರಿಯವರು ಎದುರುದಾರರು ಸೇವೆ ಸಲ್ಲಿಸುತ್ತಿದ್ದ ಮುಖ್ಯ ಇಂಜಿನಿಯರ್‌ರವರ ಕಚೇರಿ, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು ರವರಿಂದ ಈ ಮೇಲೆ ಹೇಳಿದ ಕೆ.ಸಿ.ಎಸ್. (ನಡತೆ) ನಿಯಮ 23 ರನ್ವಯ ಮುಖ್ಯ ಕಚೇರಿಯಿಂದ ಪೂರ್ವಾನುಮತಿ ಪಡೆದಿರುವ ಕುರಿತು ಸದರಿ ವರದಿಯೊಂದಿಗೆ ದಾಖಲಾತಿ ಹಾಜರುಪಡಿಸಿದ್ದು, ಸದರಿಯವರ ವರದಿಯಲ್ಲಿ ಪ್ರಸ್ತುತ ಎದುರುದಾರರು ಅವರ ಪತ್ನಿಯ ಹೆಸರಿನಲ್ಲಿ ದಾವಣಗೆರೆ ನಗರದ ವಿನಾಯಕ ಬಡಾವಣೆ, 4ನೇ ಕ್ರಾಸ್, ನಂ.1927/14 ರಲ್ಲಿರುವ 12*24 ಮೀ. ವಿಸ್ತೀರ್ಣದ ನಿವೇಶನವನ್ನು ಸುಮಾರು ರೂ.67.96 ಲಕ್ಷಗಳ ವೆಚ್ಚದಲ್ಲಿ ಈಗಾಗಲೇ ಗೃಹ ನಿರ್ಮಾಣವಾಗಿರುವ ಕುರಿತು ಅನುಮತಿ ನೀಡಿರುವ ಬಗ್ಗೆ ಈ ಮೇಲೆ ಹೇಳಿದ ಮುಖ್ಯ ಕಚೇರಿ ಅಂದರೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು ರವರ ಜ್ಞಾಪನಾ ಪತ್ರದ ಪ್ರತಿ ಹಾಜರುಪಡಿಸಿದ್ದು, ಸದರಿ ಜ್ಞಾಪನಾ ಪತ್ರದಲ್ಲಿ ಈ ಮೇಲೆ ಹೇಳಿದಂತೆ ಎದುರುದಾರರ ಪತ್ನಿಯ ಹೆಸರಿನಲ್ಲಿ ಸುಮಾರು ರೂ.67.96 ಲಕ್ಷಗಳ ವೆಚ್ಚದ ಗೃಹಕ್ಕೆ ಘಟನೋತ್ತರ ಅನುಮತಿ ಕೋರಿ ಸಂಬಂಧಪಟ್ಟ ದಾಖಲಾತಿಗಳನ್ನು ವೆಚ್ಚ ಭರಿಸುವ ವಿವರ:-

| | | |
|---|---|---|
| 1 | ಪ್ರಗತಿ ಗ್ರಾಮೀಣ ಬ್ಯಾಂಕ್, ದಾವಣಗೆರೆ ಇವರಿಂದ ಪಡೆದಿರುವ ಸಾಲ | ರೂ.33,00,000/- |
| 2 | ಸದರಿಯವರ ಪತ್ನಿ ಶ್ರೀಮತಿ.ಎಸ್.ಮಮತಾ ಇವರ ಹೆಸರಿನ ಮೇಲೆ ಇದ್ದ ಮನೆ ಮಾರಿ ಬಂದ ಮೊತ್ತ | ರೂ.21,96,000/- |
| 3 | ಸದರಿಯವರ ಸಂಬಳದ ಉಳಿತಾಯದಿಂದ | ರೂ.10,00,000/- |
| 4 | ಸದರಿಯವರ ಪತ್ನಿ ಶ್ರೀಮತಿ.ಎಸ್.ಮಮತಾ ಇವರ ಉಳಿತಾಯ | ರೂ.3,00,000/- |
| | ಒಟ್ಟು | ರೂ.67,96,000/- |

6) ಸದರಿ ಇಲಾಖೆಯವರು ತಮ್ಮ ಆದೇಶದಲ್ಲಿ ಈ ಕೆಳಗಿನಂತೆ ಆದೇಶಿಸಿರುತ್ತಾರೆ.

*"ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಗಣಿಸಿ, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಶ್ರೀ.ಟಿ.ಎಂ.ನಾಗರಾಜು, ಸಹಾಯಕ ಇಂಜಿನಿಯರ್*

*(ವಿಭಾಗ-2) ಇವರು ತಮ್ಮ ಪತ್ನಿ ಶ್ರೀಮತಿ.ಮಮತಾ ಎಸ್. ರವರ ಹೆಸರಿನಲ್ಲಿ ದಾವಣಗೆರೆ ನಗರದ ವಿನಾಯಕ ಬಡಾವಣೆ, 4ನೇ ಕ್ರಾಸ್, ನಂ.1927/14 ರಲ್ಲಿರುವ 12*24 ಮೀಟರ್ ವಿಸ್ತೀರ್ಣದ ನಿವೇಶನದಲ್ಲಿ ಸುಮಾರು ರೂ.67.96 ಲಕ್ಷಗಳ (ಅರವತ್ತೇಳು ಲಕ್ಷದ ತೊಂಬತ್ತಾರು ಸಾವಿರ) ವೆಚ್ಚದಲ್ಲಿ ಈಗಾಗಲೇ ನಿರ್ಮಿಸಿರುವ ಗೃಹಕ್ಕೆ ಸದರಿಯವರಿಗೆ ಇನ್ನು ಮುಂದೆ ಮತ್ತೊಮ್ಮೆ ಮರುಕಳುಸದಂತೆ ನೌಕರರ ಹಾಗೂ ಕುಟುಂಬದವರ ಹೆಸರಿನಲ್ಲಿ ಯಾವುದೇ ಚರ-ಸ್ಥಿರಾಸ್ತಿ ಖರೀದಿಸುವ ಮತ್ತು ಮಾರಾಟ ಮಾಡುವ ಅಥವಾ ಮನೆ ನಿರ್ಮಿಸುವ ಮುನ್ನ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯಬೇಕೆಂಬ ಎಚ್ಚರಿಕೆ ನೀಡಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 23(2) ಹಾಗೂ ವಿವರಣೆ 3(iii) ರನ್ವಯ ಘಟನೋತ್ತರ ಅನುಮತಿಯನ್ನು ನೀಡಲಾಗಿದೆ."*

7) ಸದರಿ ಈ ಮೇಲೆ ಹೇಳಿದ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯುವುದಕ್ಕೋಸ್ಕರ ಪ್ರಸ್ತುತ ಎದುರುದಾರರು ದಿ.3/9/2019 ರಂದು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಹಾಗೂ ಜಲಸಾರಿಗೆ ಇಲಾಖೆ, ದಾವಣಗೆರೆ, ರವರಿಗೆ ಮನೆ ನಿರ್ಮಿಸಲು ಅನುಮತಿ ನೀಡುವ ಬಗ್ಗೆ ಅರ್ಜಿ ಸಲ್ಲಿಸಿದ್ದು, ಅದರಂತೆ ಸದರಿ ಎದುರುದಾರರು ಸದರಿ ಇಲಾಖೆಗೆ ತನ್ನ ಆಸ್ತಿಯ ಚೆಕ್‌ಲಿಸ್ಟ್, ಬ್ಯಾಂಕ್‌ನಿಂದ ರೂ.33,00,000/- ಸಾಲ ಪಡೆದ ಬಗ್ಗೆ ಬ್ಯಾಂಕ್‌ನವರು ಕೊಟ್ಟಂತಹ ದಿ.1/5/2017ರ ಸ್ಯಾಂಕ್ಷನ್ ಮೆಮೊರಾಂಡಮ್ ಪ್ರತಿ, ಎದುರುದಾರರ ಪತ್ನಿಗೆ ಅವರ ತಾಯಿ ಶ್ರೀಮತಿ.ಪ್ರೇಮಲೀಲಾ ರವರು ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಬನೂರು ಗ್ರಾಮದ ಸ,ನಂ.158/2 ಮತ್ತು ಸ.ನಂ.158/3 ರಲ್ಲಿಯ ನಂ.1927/15 ರಲ್ಲಿ 39*76 ಅಡಿಯ ಮನೆ/ನಿವೇಶನವನ್ನು ದಿ.9/11/2016 ರಂದು ನೀಡಿರುವ ದಾನಪತ್ರದ ಜೆರಾಕ್ಸ್ ಪ್ರತಿ, ಎದುರುದಾರರ ಪತ್ನಿ ಶ್ರೀಮತಿ.ಎಸ್.ಮಮತಾ ಇವರು ಈ ಮೇಲೆ ಹೇಳಿದ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಬನೂರು ಗ್ರಾಮದ ವಿನಾಯಕ ನಗರ, 4ನೇ ಕ್ರಾಸ್, ಸೈಟ್ ನಂ.160 ರ ಡೋರ್ ನಂ.1845/160 ವಿಸ್ತೀರ್ಣದಲ್ಲಿರುವ ವಾಸದ ಮನೆಯನ್ನು ದಿ.24/9/2018 ರಂದು ಶ್ರೀ.ದೀಪಕ್ ಎಂ.ಎಸ್, ಹಳೇಪೇಟೆ ಬೀರೂರು ಟೌನ್, ಕಡೂರು ತಾಲ್ಲೂಕು ಎನ್ನುವವರಿಗೆ ರೂ.21,96,000/- ಗಳಿಗೆ ಕ್ರಯಕ್ಕೆ ಕೊಟ್ಟಿದ್ದು, ಸದರಿ ನೋಂದಾಯಿತ ಕ್ರಯ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು, ಅದೇರೀತಿ ಎದುರುದಾರರ ಹೆಸರಿನಲ್ಲಿರುವ ವಿಜಯಾ ಬ್ಯಾಂಕ್, ದಾವಣಗೆರೆ ಎಸ್.ಬಿ.ಅಕೌಂಟ್‌ನ ಪಾಸ್‌ಬುಕ್ ಜೆರಾಕ್ಸ್ ಪ್ರತಿ, ಅದೇರೀತಿ ಎದುರುದಾರರ ಪತ್ನಿ ಶ್ರೀಮತಿ.ಮಮತಾ ಎಸ್ ರವರು ಕೃಷ್ಣಾ ಗ್ರಾಮೀಣ ಬ್ಯಾಂಕ್ ದಾವಣಗೆರೆ ಶಾಖೆಯಲ್ಲಿ ಹೊಂದಿರುವ ಎಸ್.ಬಿ.ಅಕೌಂಟ್‌ನ ಪಾಸ್‌ಬುಕ್‌ನ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಈ ಮೇಲೆ ಹೇಳಿದ ವಾಸದ ಮನೆಯ ಕಟ್ಟಡದ ವೆಚ್ಚದ ಕುರಿತು ಎದುರುದಾರರ ಪತ್ನಿ ವಾಸದ ಮನೆಯ ಕ್ರಯಪತ್ರ, ಎದುರುದಾರ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್, ದಾವಣಗೆರೆ ಶಾಖೆಯಿಂದ ಸಾಲ ಪಡೆದ ಕುರಿತು ಬ್ಯಾಂಕ್‌ನವರು ಕೊಟ್ಟಂತಹ ದಿ.1/5/2017 ರ ಸ್ಯಾಂಕ್ಷನ್ ಲೆಟರ್, ಎದುರುದಾರರು ಹಾಗೂ ಅವರ ಪತ್ನಿಯ ಎಸ್.ಬಿ.ಅಕೌಂಟ್ ಪಾಸ್‌ಬುಕ್‌ನ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು ನೋಡಲಾಗಿ ಸದರಿ ಮನೆ ಕಟ್ಟಡದ ವೆಚ್ಚದ ಕುರಿತು ಸದರಿ ದಾಖಲಾತಿಗಳು ಸರಿಯಿರುತ್ತವೆ. ಆದರೆ, ಈ ಮೇಲೆ

ಹೇಳಿದಂತೆ ಕಟ್ಟಡ ಕಟ್ಟುವುದಕ್ಕಿಂತ ಪೂರ್ವದಲ್ಲಿ ಸದರಿ ಎದುರುದಾರರು ಸಕ್ಷಮ ಪ್ರಾಧಿಕಾರವಾದ ಮುಖ್ಯ ಇಂಜಿನಿಯರ್ ಕಚೇರಿ, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು ಇವರಿಂದ ಪೂರ್ವಾನುಮತಿ ಪಡೆದಿರುವುದಿಲ್ಲವೆಂದು ಸದರಿಯವರು ಕೊಟ್ಟಂತಹ ಜ್ಞಾಪನಾ ಪತ್ರದ ಮೂಲಕ ಮೇಲ್ನೋಟಕ್ಕೆ ಕಂಡುಬರುತ್ತದೆ.

8) ಅದೇರೀತಿ ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪೂರ್ವ ವಲಯ, ದಾವಣಗೆರೆ, ಇವರ ವರದಿಯನ್ವಯ ಈ ಕೆಳಗೆ ವಿವರಿಸಿದ ಚರಾಸ್ತಿಗಳನ್ನು ಎದುರುದಾರರು ಹೊಂದಿರುವುದ ಕಂಡುಬಂದಿರುತ್ತದೆ.

| | | |
|---|---|---|
| 1 | ಎದುರುದಾರರ ಮಗಳು ಪ್ರೀತಿ ಇವರ ಹೆಸರಿನಲ್ಲಿ ಕೆಎ 17 ಇಡಬ್ಲ್ಯೂ 0164 ಕ್ಯಾಸಿನೋ ಸ್ಕೂಟರ್ | ರೂ.70,000/- |
| 2 | ಎದುರುದಾರರ ಹೆಸರಿನಲ್ಲಿ ಕೆಎ 17 ಪಿ 4833 ಟಾಟಾ ಕಂಪನಿಯ ಬೋಲ್ಟ್ ಕಾರ್ | ರೂ.6,00,000/- |

9) ಪ್ರಸ್ತುತ ಎದುರುದಾರರ ಪತ್ನಿ ಮತ್ತು ಮಗಳು ಎದುರುದಾರರ ಕುಟುಂಬದ ಸದಸ್ಯರಾಗಿದ್ದರಿಂದ, ಎದುರುದಾರರಿಗೆ ದೂರಿಗೆ ಸಂಬಂಧಪಟ್ಟಂತೆ ಮತ್ತು ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ, ದಾವಣಗೆರೆ ಇವರು ನೀಡಿರುವ ವರದಿಯ ಮೇಲೆ ಆಕ್ಷೇಪಣೆ ಸಲ್ಲಿಸುವಂತೆ ಆದೇಶಿಸಲಾಯಿತು.

10) ಎದುರುದಾರರು ದಿ.6/8/2021 ರಂದು ತನ್ನ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ತನಿಖಾಧಿಕಾರಿಯವರ ವರದಿಗೆ ನನ್ನ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

11) ಮುಂದುವರೆದು, ಪ್ರಸ್ತುತ ದೂರುದಾರರು ಶ್ರೀರಾಮಸೇನೆ ಜಿಲ್ಲಾಧ್ಯಕ್ಷರಾಗಿರುತ್ತಾರೆ. ಸದರಿಯವರು ಸರ್ಕಾರಿ ನೌಕರರನ್ನು ಬೆದರಿಸಿ, ಪಿಸ್ತೂಲು ಹಿಡಿದುಕೊಂಡು ಹಣ ಕೊಡುವಂತೆ ಬೇಡಿಕೆ ಇಡುತ್ತಾರೆ. ಹಣ ಕೊಡದೇ ಇದ್ದಲ್ಲಿ ಲೋಕಾಯುಕ್ತರಿಗೆ ಅರ್ಜಿ ಸಲ್ಲಿಸುವುದಾಗಿ ಬೆದರಿಸಿರುತ್ತಾರೆ. ಆ ಕುರಿತು ಸುಮಾರು 21 ಜನ ಅಧಿಕಾರಿಗಳ ವಿರುದ್ಧ ಲೋಕಾಯುಕ್ತರಿಗೆ ದೂರು ಸಲ್ಲಿಸಿರುತ್ತಾರೆ. ಅದರಂತೆ, ದಾವಣಗೆರೆ ಬಡಾವಣೆ ಪೊಲೀಸ್ ಠಾಣೆಯಲ್ಲಿ ಶ್ರೀ.ಕೆ.ಆರ್.ಆನಂದ ಬಿನ್ ಆರ್.ಹೆಚ್.ಕೃಷ್ಣಪ್ಪ, ದಾವಣಗೆರೆ ಎಂಬುವವರು ದಿ.23/9/2015 ರಂದು ಈ ಮೇಲೆ ಹೇಳಿದ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ಸದರಿ ಪ್ರಕರಣ ಸಂ.187/2015 ಕಲಂ 504, 506, 427, 307, ರೆ/ವಿ 34 ಐಪಿಸಿ ಹಾಗೂ 27, 30 ಆರ್ಮ್ಸ್ ಆಕ್ಟ್ ಅಡಿಯಲ್ಲಿ ದಾಖಲಾಗಿದ್ದು, ಅದರಂತೆ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ಜೆ.ಎಂ.ಎಫ್.ಸಿ.ದಾವಣಗೆರೆ ನ್ಯಾಯಾಲಯದ ಸಿ.ಸಿ.ನಂ.1717/2017 ಆಗಿರುತ್ತದೆ.

12) ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಮುಂದುವರೆದು, ಸದರಿ ಎ.ಸಿ.ಬಿ. ರವರು ನೀಡಿರುವ ವರದಿಯನ್ವಯ ಅಸಮತೋಲನ ಆಸ್ತಿ 3.1% ಆಗಿರುವುದು ಯಾವುದೇ ಆಧಾರವಿಲ್ಲದೆ ಕೇವಲ ಅಂದಾಜು ಎಂಬುದಾಗಿ ಪರಿಗಣಿಸಿರುತ್ತಾರೆ. ಈ ಮಾಹಿತಿ ಕೇವಲ ಅಂದಾಜು ವಿನಃ ನಿಖರವಾಗಿರುವುದಿಲ್ಲ. ನಾನು ನನ್ನ ಬಲ್ಲ ಮೂಲಗಳ ಆದಾಯಕ್ಕಿಂತ ಅಧಿಕವಾಗಿ ಯಾವುದೇ ಆಸ್ತಿಗಳನ್ನು ಗಳಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆ ಕುರಿತು ಸರ್ವೋಚ್ಛ ನ್ಯಾಯಾಲಯದ ಕ್ರಿಮಿನಲ್ ಅಪೀಲ್ ನಂ.782/2011 ಪ್ರಕರಣದಲ್ಲಿ ದಿ.23/3/2015 ರಂದು ಆಗಿರುವ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ತೀರ್ಪಿನ ಪ್ರಕಾರ ಸಾರ್ವಜನಿಕ ನೌಕರರು ತಮ್ಮ ಆದಾಯದ ಶೇ.10 ಕ್ಕಿಂತ ಕಡಿಮೆ ಪ್ರಮಾಣದ ಅಸಮತೋಲನ ಆಸ್ತಿಗಳನ್ನು ಹೊಂದಲು ಅವಕಾಶವಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ತೀರ್ಪು ಎದುರುದಾರರ ಮೇಲಿರುವ ಆರೋಪಕ್ಕೆ ಯಾವುದೇ ರೀತಿ ಸಹಕಾರಿಯಾಗಿರುವುದಿಲ್ಲ. ಏಕೆಂದರೆ, ಈ ಪ್ರಕರಣದಲ್ಲಿ ಎದುರುದಾರರು ನಿಯಮಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ಚರ ಮತ್ತು ಸ್ಥಿರಾಸ್ತಿಗಳನ್ನು ಹೊಂದಿರುವುದರಿಂದ,ಕ ಕೆ.ಸಿ.ಎಸ್. (ನಡತೆ) ನಿಯಮಗಳ, ನಿಯಮ 23 ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

13) ಸದರಿ ಎದುರುದಾರರು ಚೆಕ್‌ಲಿಸ್ಟ್ ಪ್ರಕಾರ ಸೇವೆಗೆ ಸೇರಿರುವ ದಿ.27/11/1989. ಆದುದರಿಂದ, ಈ ಮೇಲೆ ಹೇಳಿದ ಎರಡು ವಾಹನಗಳನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿರುವ ಕುರಿತು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ದಾವಣಗೆರೆ ಇವರು ಸಲ್ಲಿಸಿದ ದಿ.20/1/2021 ರ ವರದಿಯಲ್ಲಿ ನಮೂದಿಸಿರುವುದಿಲ್ಲ. ಅದೇರೀತಿ ಎದುರುದಾರರ ಪತ್ನಿ ಶ್ರೀಮತಿ.ಮಮತಾ ಇವರು ಈ ಮೇಲೆ ಹೇಳಿದ ಅವರ ತಾಯಿ ಶ್ರೀಮತಿ.ಪ್ರೇಮಲೀಲಾ ಇವರಿಂದ ದಿ.9/11/2016 ರಂದು ಅದರಲ್ಲಿ ನಮೂದಿಸಿದ ನಿವೇಶನ ದಾನವಾಗಿ ಪಡೆಯುವುದಕ್ಕಿಂತ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ ಹಾಗೂ ಪ್ರಸ್ತುತ ಎದುರುದಾರರ ಪತ್ನಿ ವಾಸದ ಮನೆಯ ಕ್ರಯಪತ್ರ ದಿ.24/9/2018 ರಂದು ರೂ.21,96,000/- ಗಳಿಗೆ ಕ್ರಯಕ್ಕೆ ಕೊಡುವುದಕ್ಕಿಂತ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿರುವುದಿಲ್ಲ. ಸದರಿ ಈ ಮೇಲೆ ಹೇಳಿದ ದಿ.9/11/2016 ರಂದು ದಾನ ಪಡೆದ ನಂತರವೂ ಹಾಗೂ ಎದುರುದಾರರ ಪತ್ನಿ ತನ್ನ ವಾಸದ ಮನೆಯನ್ನು ದಿ.24/9/2018 ರಂದು ಕ್ರಯಕ್ಕೆ ಕೊಟ್ಟ ನಂತರವೂ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡಿರುವುದಿಲ್ಲ. ಆದುದರಿಂದ, ಎದುರುದಾರರು ಕೆ.ಸಿ.ಎಸ್. (ನಡತೆ) ನಿಯಮ 23 ನ್ನು ಉಲ್ಲಂಘಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

14) ಆದರೆ ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿಯವರು ಸಲ್ಲಿಸಿದ ವರದಿಯಲ್ಲಿ ನಮೂದಿಸಿದ ಚರ ಸ್ವತ್ತುಗಳಾದ ಎದುರುದಾರರ ಮಗಳಾದ ಪ್ರೀತಿ ಎನ್ನುವವರ ಹೆಸರಿನಲ್ಲಿ ನೋಂದಾಯಿಸಲ್ಪಟ್ಟ ಸ್ಕೂಟರ್ ನಂ.ಕೆಎ 17 ಇಡಬ್ಲ್ಯೂ 0164 ಮೊತ್ತ ರೂ.70,000/- ಹಾಗೂ ಎದುರುದಾರರ ಹೆಸರಿನಲ್ಲಿ ನೋಂದಾಯಿಸಲ್ಪಟ್ಟ ಕಾರ್ ನಂ.ಕೆಎ 17 ಪಿ 4833 ಮೊತ್ತ ರೂ.6 ಲಕ್ಷಗಳು, ಸದರಿ ಎರಡು

ವಾಹನಗಳನ್ನು ಖರೀದಿಸಿರುವ ಪೂರ್ವದಲ್ಲಾಗಲೀ, ಅಥವಾ ಖರೀದಿಸಿದ ನಂತರವಾಗಲೀ ಎದುರುದಾರರು ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡಿರುವುದಿಲ್ಲ. ಅದೂ ಅಲ್ಲದೆ ಸದರಿ ಎರಡು ವಾಹನಗಳನ್ನು ಯಾವ ಆದಾಯದ ಮೂಲದಿಂದ ಖರೀದಿಸಿರುತ್ತಾರೆ ಎನ್ನುವ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದುದರಿಂದ, ಪ್ರಸ್ತುತ ಎದುರುದಾರರು ಕೆ.ಸಿ.ಎಸ್. (ನಡತೆ) ನಿಯಮ 23 ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆ ಕಾರಣ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯಸ್ಥರಾಗಿರುತ್ತಾರೆ.

15) ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ಕೆ.ಸಿ.ಎಸ್. (ನಡತೆ) ನಿಯಮ 23 ನ್ನು ಉಲ್ಲಂಘನೆ ಮಾಡಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ ನಿಯಮ 23 (ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

16) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

21/2/22

**(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**